# ಕರ್ನಾಟಕ ಸರ್ಕಾರ

ಸಂಖ್ಯೆ: ಇಎನ್ 73 ವಿಎಸ್‌ಸಿ 2018

ಕರ್ನಾಟಕ ಸರ್ಕಾರದ ಸಚಿವಾಲಯ
ಬೆಂಗಳೂರು, ದಿನಾಂಕ:08-03-2018

## ಅಧಿಸೂಚನೆ

ವಿಷಯ: ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕಿನ, ಆಲಹಳ್ಳಿ ಗ್ರಾಮದಲ್ಲಿ 20ಮೆ.ವ್ಯಾ. ಸಾಮರ್ಥ್ಯದ ಸೌರ ವಿದ್ಯುತ್ ಉತ್ಪಾದನಾ ಘಟಕ ಸ್ಥಾಪಿಸುವ ಬಗ್ಗೆ.

ಉಲ್ಲೇಖ:
1. ವ್ಯವಸ್ಥಾಪಕ ನಿರ್ದೇಶಕರು, ಕ್ರೆಡಲ್‌ರವರ ಮನವಿ ಪತ್ರ ಸಂಖ್ಯೆ: ಕೆ.ಆರ್.ಇ.ಡಿ/01/ಆಡಳಿತ/ಜಿ.ಆರ್.ಟಿ-556/2018/1618-19 ದಿ:27.02.2018.
2. ಸರ್ಕಾರದ ಅಧಿಸೂಚನೆ ಸಂಖ್ಯೆ:ಇಎನ್ 218 ವಿಎಸ್‌ಸಿ 2017 ದಿನಾಂಕ:15.09.2017.
3. ಸರ್ಕಾರದ ಅಧಿಸೂಚನೆ ಸಂಖ್ಯೆ:ಇಎನ್ 170 ವಿಎಸ್‌ಸಿ 2017 ದಿನಾಂಕ:03.08.2017.

********

ಸೌರ ವಿದ್ಯುತ್‌ನ್ನು ಪ್ರೋತ್ಸಾಹಿಸಲು ಸರ್ಕಾರವು ಅಧಿಸೂಚನೆ ಸಂಖ್ಯೆ: ಇಎನ್ 21 ವಿಎಸ್‌ಸಿ 2014 ದಿನಾಂಕ: 22.05.2014 ಮತ್ತು ತಿದ್ದುಪಡಿ ಸಂಖ್ಯೆ: ಇಎನ್ 49 ವಿಎಸ್‌ಸಿ 2016 ದಿನಾಂಕ: 12.01.2017ರಂತೆ ಸೌರ ನೀತಿ 2014-21ಅನ್ನು ಜಾರಿಗೊಳಿಸಿರುತ್ತದೆ. ಸದರಿ ನೀತಿಯನ್ವಯ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ (ಕ್ರೆಡಲ್) ಸಂಸ್ಥೆಯು ಸೌರ ನೀತಿಯ ಅನುಷ್ಠಾನಕ್ಕೆ ನೇಮಿತ ಪ್ರತಿನಿಧಿಯಾಗಿರುತ್ತದೆ.

ಮೆ॥ ಜಿ.ಆರ್.ಟಿ. ಜ್ಯುವೆಲರ್ಸ್ (ಇಂಡಿಯಾ) ಪ್ರೈ.ಲಿ., ರವರಿಗೆ ಕ್ರೆಡಲ್ ಸಂಸ್ಥೆಯಿಂದ 20ಮೆ.ವ್ಯಾ ಸಾಮರ್ಥ್ಯದ ಸೌರ ವಿದ್ಯುತ್ ಯೋಜನೆಗಳನ್ನು ಸ್ಥಾಪಿಸಲು ಹಂಚಿಕೆ ನೀಡಲಾಗಿರುತ್ತದೆ. ವ್ಯವಸ್ಥಾಪಕ ನಿರ್ದೇಶಕರು, ಕ್ರೆಡಲ್ ರವರ ದಿನಾಂಕ:15.07.2017ರ ಪ್ರಸ್ತಾವನೆಯಂತೆ ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕಿನ, ಅಲಹಳ್ಳಿ ಗ್ರಾಮದಲ್ಲಿ 41-01 (ಎ-ಗು) ವಿಸ್ತೀರ್ಣದ ಖಾಸಗಿ ಜಮೀನುಗಳನ್ನು ಕರ್ನಾಟಕ ಭೂ ಸುಧಾರಣಾ ಅಧಿನಿಯಮದನ್ವಯ ಶಾಸನಬದ್ಧ ಅನುಮೋದನೆಗಳ ನಂತರ ಕ್ರೆಡಲ್ ಸಂಸ್ಥೆಯು ಗುತ್ತಿಗೆ ಪಡೆದು ಸದರಿ ಜಮೀನುಗಳನ್ನು ಖಾಸಗಿ ಸೌರ ವಿದ್ಯುತ್ ಅಭಿವೃದ್ಧಿದಾರರಿಗೆ ನಿಯಮಾನುಸಾರ ಉಪಗುತ್ತಿಗೆ ನೀಡುವ ಸಂಬಂಧ ಮೊದಲ ಕಂತಿನ ಅಧಿಸೂಚನೆಯನ್ನು ದಿನಾಂಕ:03.08.2017 ರಂದು ಹೊರಡಿಸಲಾಗಿದೆ.

ಮುಂದುವರೆದು, ವ್ಯವಸ್ಥಾಪಕ ನಿರ್ದೇಶಕರು, ಕ್ರೆಡಲ್ ರವರ ದಿನಾಂಕ:31.08.2017ರ ಪ್ರಸ್ತಾವನೆಯಂತೆ ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕಿನ, ಅಲಹಳ್ಳಿ ಗ್ರಾಮದಲ್ಲಿ 24-10 (ಎ-ಗು) ವಿಸ್ತೀರ್ಣದ ಖಾಸಗಿ ಜಮೀನುಗಳನ್ನು ಕರ್ನಾಟಕ ಭೂ ಸುಧಾರಣಾ ಅಧಿನಿಯಮದನ್ವಯ ಶಾಸನಬದ್ಧ ಅನುಮೋದನೆಗಳ ನಂತರ ಕ್ರೆಡಲ್ ಸಂಸ್ಥೆಯು ಗುತ್ತಿಗೆ ಪಡೆದು ಸದರಿ ಜಮೀನುಗಳನ್ನು ಖಾಸಗಿ ಸೌರ

ವಿದ್ಯುತ್ ಅಭಿವೃದ್ಧಿದಾರರಿಗೆ ನಿಯಮಾನುಸಾರ ಉಪಗುತ್ತಿಗೆ ನೀಡುವ ಸಂಬಂಧ ಎರಡನೇ ಕಂತಿನ ಅಧಿಸೂಚನೆಯನ್ನು ದಿನಾಂಕ:15.09.2017 ರಂದು ಹೊರಡಿಸಲಾಗಿದೆ.

ಮುಂದುವರೆದು, ವ್ಯವಸ್ಥಾಪಕ ನಿರ್ದೇಶಕರು, ಕ್ರೆಡಲ್‌ರವರ ಪ್ರಸ್ತಾವನೆ ದಿನಾಂಕ:27.02.2018 ರಲ್ಲಿ ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕಿನ, ಆಲಹಳ್ಳಿ ಗ್ರಾಮದಲ್ಲಿ ಯೋಜನೆಗೆ ಅವಶ್ಯವಿರುವ 9-00 (ಎ-ಗು) ವಿಸ್ತೀರ್ಣದ ಖಾಸಗಿ ಜಮೀನುಗಳನ್ನು ಕರ್ನಾಟಕ ಭೂ ಸುಧಾರಣಾ ಅಧಿನಿಯಮದನ್ವಯ ಶಾಸನಬದ್ಧ ಅನುಮೋದನೆಗಳ ನಂತರ ಕ್ರೆಡಲ್ ಸಂಸ್ಥೆಯು ಗುತ್ತಿಗೆ ಪಡೆದು ಸದರಿ ಜಮೀನುಗಳನ್ನು ಖಾಸಗಿ ಸೌರ ವಿದ್ಯುತ್ ಅಭಿವೃದ್ಧಿದಾರರಿಗೆ ನಿಯಮಾನುಸಾರ ಉಪಗುತ್ತಿಗೆ ನೀಡುವ ಸಂಬಂಧ ಮೂರನೇ ಕಂತಿನ ಅಧಿಸೂಚನೆ ಹೊರಡಿಸುವ ಸಂಬಂಧ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸರ್ಕಾರದ ಆದೇಶ ಸಂಖ್ಯೆ: ಇಎನ್ 66 ವಿಎಸ್‌ಸಿ 2016 ದಿನಾಂಕ: 05.10.2016 ಮತ್ತು ಕರ್ನಾಟಕ ಭೂಕಂದಾಯ ಅಧಿನಿಯಮ (ತಿದ್ದುಪಡಿ), 2015 (ಕರ್ನಾಟಕ ಅಧಿನಿಯಮ 2015ರ ಸಂಖ್ಯೆ: 31)ರನ್ವಯ ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕಿನ, ಆಲಹಳ್ಳಿ ಗ್ರಾಮದಲ್ಲಿ ಅನುಬಂಧದಲ್ಲಿ ನಮೂದಿಸಿರುವ ಸರ್ವೆ ನಂಬರ್ ಹಾಗೂ ಭೂಮಾಲೀಕರ ಹೆಸರುಗಳನ್ನೊಳಗೊಂಡ 9-00 (ಎ-ಗು) ವಿಸ್ತೀರ್ಣದ ಖಾಸಗಿ ಜಮೀನುಗಳಲ್ಲಿ, ಸೌರ ವಿದ್ಯುತ್ ಉತ್ಪಾದನಾ ಘಟಕಗಳನ್ನು ಅಳವಡಿಸುವ ಉದ್ದೇಶದಿಂದ, ಕರ್ನಾಟಕ ಭೂ ಸುಧಾರಣಾ ಅಧಿನಿಯಮದನ್ವಯ ಶಾಸನಬದ್ಧ ಅನುಮೋದನೆಗಳ ನಂತರ ಕ್ರೆಡಲ್ ಸಂಸ್ಥೆಯು ಗುತ್ತಿಗೆ ಆಧಾರದ ಮೇಲೆ ಜಮೀನುಗಳನ್ನು ಪಡೆದು ತರುವಾಯ ಜಮೀನುಗಳನ್ನು ಖಾಸಗಿ ಸೌರ ವಿದ್ಯುತ್ ಅಭಿವೃದ್ಧಿದಾರರಿಗೆ ನಿಯಮಾನುಸಾರ ಉಪಗುತ್ತಿಗೆಗೆ ನೀಡಲು ಸರ್ಕಾರ ಅನುಮತಿಸಿದೆ.

ಮುಂದುವರೆದು, ವ್ಯವಸ್ಥಾಪಕ ನಿರ್ದೇಶಕರು, ಕ್ರೆಡಲ್ ಇವರು ಉಪಗುತ್ತಿಗೆ ನೀಡಲು ಪ್ರಸ್ತಾಪಿಸಿರುವ ಸದರಿ ಜಮೀನುಗಳ ಮಾಲೀಕತ್ವ/ವಾರಸುದಾರರು, ಸರ್ವೆನಂಬರ್ ಇತ್ಯಾದಿ ದಾಖಲಾತಿಗಳನ್ನು ಪರಿಶೀಲಿಸಿ ಖಾತರಿಪಡಿಸಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಬಿ.ವಿ.ಶ್ರೀನಿವಾಸಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ.

**ಇವರಿಗೆ,**

ಸಂಕಲನಕಾರರು, ಸರ್ಕಾರಿ ಮುದ್ರಣಾಲಯ, ಬೆಂಗಳೂರು.

**ಪ್ರತಿಗಳು:**

1. ಪ್ರಧಾನ **ಕಾರ್ಯದರ್ಶಿ**ಗಳು, ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ವ್ಯವಸ್ಥಾಪಕ **ನಿರ್ದೇ**ಶಕರು, ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮ ನಿ., ಕಾವೇರಿ ಭವನ, ಬೆಂಗಳೂರು–560 009.
3. ವ್ಯವಸ್ಥಾಪಕ **ನಿರ್ದೇ**ಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ನಂ. 39, **"ಶಾಂತಿ ಗೃಹ"** ಪ್ಯಾಲೆಸ್ ರಸ್ತೆ, ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಬಿಲ್ಡಿಂಗ್, ಬೆಂಗಳೂರು–560 001.
4. ಜಿಲ್ಲಾಧಿಕಾರಿಗಳು, ರಾಮನಗರ ಜಿಲ್ಲೆ.
5. ಕಾರ್ಯದರ್ಶಿಗಳು, ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ, ನಂ. 9/2, 6ನೇ ಮತ್ತು 7ನೇ ಮಹಡಿ, ಮಹಾಲಕ್ಷ್ಮಿ ಛೇಂಬರ್ಸ್, ಎಂ.ಜಿ. ರಸ್ತೆ, ಬೆಂಗಳೂರು.
6. ಮಾನ್ಯ ಇಂಧನ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
7. ನಿರ್ದೇಶಕರು(ಆರ್ಥಿಕ), ಅಪರ ನಿರ್ದೇಶಕರು(ತಾಂತ್ರಿಕ ಮೇಲ್ವಿಚಾರಣೆ), ಜಂಟಿ ನಿರ್ದೇಶಕರು(ಎನ್.ಸಿ.ಇ. 2&3), ಜಂಟಿ ನಿರ್ದೇಶಕರು(ಯೋಜನೆ), ಇಂಧನ ಇಲಾಖೆ, ವಿಕಾಸ ಸೌಧ, ಬೆಂಗಳೂರು.
8. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಇಂಧನ ಇಲಾಖೆ, ವಿಕಾಸ ಸೌಧ, ಬೆಂಗಳೂರು.
9. ಸರ್ಕಾರದ ಉಪ ಕಾರ್ಯದರ್ಶಿರವರ ಆಪ್ತ ಸಹಾಯಕರು, ಇಂಧನ ಇಲಾಖೆ, ವಿಕಾಸ ಸೌಧ, ಬೆಂಗಳೂರು.
10. ಶಾಖೆ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

ಸರ್ಕಾರದ ಅಧಿಸೂಚನೆ ಸಂಖ್ಯೆ: ಇಎನ್ 73 ವಿಎಸ್‌ಸಿ 2018 ದಿನಾಂಕ:08.03.2018ಕ್ಕೆ ಅನುಬಂಧ

ಗ್ರಾಮ: ಆಲಹಳ್ಳಿ, ತಾ॥ ಕನಕಪುರ, ಜಿಲ್ಲೆ: ರಾಮನಗರ

| ಕ್ರ.ಸಂ | ಸರ್ವೇ ನಂ | ಭೂ ಮಾಲೀಕರ ಹೆಸರು | ವಿಸ್ತೀರ್ಣ (ಎ–ಗುಂ) |
|---|---|---|---|
| 1 | 313/4 | ಚೌಡಮ್ಮ ಕೋಂ ಲೇಟ್ ಪದ್ದೇಗೌಡ | 1–24 |
| 2 | 238/4 | ಕುನ್ನೇಗೌಡ ಬಿನ್ ಲೇ. ದೊಡ್ಡಕೆಂಪೇಗೌಡ | 1–39 |
| 3 | 317/6 | ಕುನ್ನೇಗೌಡ | 2–21 |
| 4 | 311/1ಎ | ಜಯಮ್ಮ ಕೋಂ ಲೇ. ಮಾದಯ್ಯ | 1–00 |
| 5 | 235/2 | ಪುಟ್ಟೇಗೌಡ ಬಿನ್ ದೊಡ್ಡೈದೇಗೌಡ | 0–38 |
| | | ಗೌರಮ್ಮ ಕೋಂ ಪುಟ್ಟಸ್ವಾಮಿ | 0–13 |
| | | ಪುಟ್ಟೇಗೌಡ ಬಿನ್ ಕೆಂಚೇಗೌಡ | 0–12.08 |
| | | ಕೆಂಪಮ್ಮ ಕೋಂ ಗೂಸ್ಲೇಗೌಡ | 0–12.08 |
| | | **ಒಟ್ಟು** | **9–00** |

(ಬಿ.ವಿ.ಶ್ರೀನಿವಾಸಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ.